ಜೂನ್ - 1

ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು. ನಾನು ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವನು ಎಂದು ಹೇಳಿದನು. -ಯೋಹಾನ 14:21

ಕ್ರಿಸ್ತನೊಂದಿಗೆ ನಮಗಿರುವ ಈ ಒಂದು ಹತ್ತಿರದ ಸಂಸರ್ಗ ಮತ್ತು ಅನ್ಯೋನ್ಯತೆಯಿಂದಾಗಿ ನಮ್ಮಲ್ಲಿ ಆತನ ದಿವ್ಯ ಗುಣಗಳನ್ನು ಹೆಚ್ಚೆಚ್ಚಾಗಿ ಪಡೆಯುವಂತೆ ಮಾಡಿ ಲೋಕವು ನಾವು ಕ್ರಿಸ್ತನೊಂದಿಗೆ ಇದ್ದವರು ಎಂಬದನ್ನು ತಿಳಿಯುವಂತಾಗಲಿ ಮತ್ತು ನಮ್ಮೊಬ್ಬಬ್ಬರ ಪ್ರಾರ್ಥನೆಯು ಈ ರೀತಿ ಇರಲಿ.

ಕರ್ತನಾದ ಕ್ರಿಸ್ತೇಸುವೇ ನನ್ನನ್ನು ನಿನ್ನವನಾಗಿಸು

ಒಂದು ಜೀವಂತ ಪ್ರಕಾಶಿಸುವ ನೈಜತೆಯಿಂದ

ಕಣ್ಣಿಗೆ ಕಾಣುವ ಲೋಕದ ವಸ್ತುಗಳಿಗಿಂತ

ನಂಬಿಕೆಯೆಂಬ ದೃಷ್ಟಿಕೋನ ಹೆಚ್ಚು ಸತ್ಯವಾಗಿದ್ದು

ಹೆಚ್ಚು ಪ್ರೀತಿಮಯ ಮತ್ತು ಹೆಚ್ಚು ಹತ್ತಿರವಾಗಿ

ಲೌಕಿಕ ಜೀವನಕ್ಕಿಂತ ಮಧುರವಾಗಿ ಕಾಣುವಂತಾಗಲಿ.-Z '95,75 (ಖ 1789).

* * *

ಜೂನ್ - 2

ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸುಕ್ರಿಸ್ತನನ್ನೇ ಹೊರತು, ಬೇರೆ ಯಾವದನ್ನು ತಿಳಿದವನಾಗಿ ನಿಮ್ಮಲ್ಲಿ ಇರುವನೆಂದು ತೀರ್ಮಾನಿಸಿಕೊಂಡೆನು.

-1 ಕೊರಿಂಥ 2:2

ದೇವರಿಗೆ ಪ್ರತಿಷ್ಠೆಪಡಿಸಿಕೊಂಡವರಲ್ಲಿ ನಾವು ಗಮನಿಸಿರುವ ಸಂಗತಿ ಏನಂದರೆ, ಈ ಸುವಾರ್ತೆಯನ್ನಲ್ಲದೆ, ಬೇರೆ ಧ್ಯೇಯಗಳ ಬಗ್ಗೆ, ವಿಷಯಗಳ ಬಗ್ಗೆ ತಮ್ಮ ಸಮಯ ಮತ್ತು ತಲಾಂತನ್ನು ವಿನಿಯೋಗಿಸುವದನ್ನು, ಬೇರೆ ಯಾವ ವಿಷಯವಾಗಲೀ ಅಥವ ಆ ವಿಷಯಗಳು ಎಷ್ಟೇ ಕುತೂಹಲಕಾರಿಯಾಗಿದ್ದರೂ ಅವುಗಳಿಗೆ ಆಧ್ಯತೆ ಕೊಡದೆ ತಮಗಿರುವ ಸಮಯ ಮತ್ತು ಸಾಮಥ್ರ್ಯವನ್ನು ಸುವಾರ್ತ ಸೇವೆಗೇ ಉಪಯೋಗಿಸಬೇಕೆಂದು ಸಲಹೆ ಕೊಡುತ್ತೇವೆ. ಯಾಕಂದರೆ, ನಮಗೆ ದೇವರು ದಯಪಾಲಿಸುವ ಮುಂದಣ ಜೀವದಲ್ಲಿ ಎಲ್ಲಾ ಜ್ಞಾನ ವಿಷಯಗಳು ನಮ್ಮದಾಗಿರುತ್ತವೆ. ಬೇರೆ ವಿಷಯಗಳಿಗೆ ಗಮನಕೊಡುವದನ್ನು ತಪ್ಪಿಸುವ ಅವಕಾಶ ಅವರಿಗಿದ್ದರೂ ಅದನ್ನು ಗಣನೆಗೆ ತಾರದೆ

ಮುಂದುವರೆಯುವವರು ಬಹು ಬೇಗ ಸತ್ಯ ಸುವಾರ್ತೆಯನ್ನು ಸಾರುವ ಕಾರ್ಯದಿಂದ ತಪ್ಪುವವರು ಅಥವ ಈ ವಿಷಯಗಳು ಅವರು ನಡೆಯುವ ಮಾರ್ಗದಲ್ಲಿ ಅಡ್ಡಿಯಾಗಿ ದೇವರ ರಾಜ್ಯವನ್ನು ಪಡೆಯಲು ಸಾಧ್ಯವಾಗುವುದಿಲ್ಲ-Z '95, 116 (ಖ 1811).

* * *

ಜೂನ್ - 3

ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ; ಗಗನವು ಆತನ ಕೈ ಕೆಲಸವನ್ನು ತಿಳಿಸುತ್ತದೆ. ದಿನವು ದಿನಕ್ಕೆ ಪ್ರಕಟಿಸುವದು. ಶಬ್ಧವಿಲ್ಲ, ಮಾತಿಲ್ಲ ಅವುಗಳ ಸ್ವರ ಕೇಳಿಸುವದಿಲ್ಲ. ಆದರೂ ಅವುಗಳ ಪ್ರಭುತ್ವವು ಭೂಮಿಯಲ್ಲೆಲ್ಲಾ ಪ್ರಸರಿಸಿದೆ. -ಕೀರ್ತನೆಗಳು 19:1-4

ಅದ್ಭುತವಾದ ಆಕಾಶ ಕಾಯಗಳ ಸೈನ್ಯವು ಹಗಲು ರಾತ್ರಿಗಳಲ್ಲಿ ಅವುಗಳು ಚಟುವಟಿಕೆಯಿಂದ ನಿರ್ವಹಿಸುವ ಕಾರ್ಯಗಳನ್ನು ನಾವು ವೀಕ್ಷಿಸುವಾಗ ನಮ್ಮ ಹೃದಯವು ಪ್ರೇರೇಪಿತವಾಗಿ ದೇವರಲ್ಲಿ ಭಯಭಕ್ತಿಯನ್ನು ವ್ಯಕ್ತಗೊಳಿಸುವದು. ಶಬ್ಧವಿಲ್ಲದೆ, ಮಾತಿಲ್ಲದೆ ತಮ್ಮ ಕಾರ್ಯಚಟುವಟಿಕೆಯಲ್ಲಿ ನಿರತವಾಗಿರುವ ಈ ಆಕಾಶಕಾಯಗಳು ದೈವನಿಯಮವನ್ನು ಪರಿಪೂರ್ಣ ವಿಧೇಯತ್ವದಿಂದ ನಿರ್ವಹಿಸುತ್ತಿರುವದು ಆಶೀರ್ವಾದಭರಿತವಾಗಿದೆ. ಈ ಆಕಾಶಕಾಯಗಳು ಬೀರುತ್ತಿರುವ ಪ್ರಜ್ವಲಿತ ಪ್ರಕಾಶವು ನಮಗೆ ಕಲಿಸುವ ಪಾಠವೇನಂದರೆ, ನಾವು ದೇವರ ಕಾರ್ಯಗಳನ್ನು ಯಾವ ಗದ್ದಲ ಮತ್ತು ಆಡಂಬರವಿಲ್ಲದೆ ಉತ್ಸುಕತೆಯಿಂದ ನಿರ್ವಹಿಸಿ ದೇವರ ಚಿತ್ತಕ್ಕೆ ವಿಧೇಯರಾಗಿ ನಡೆಯುವುದಾಗಿದೆ. ದೇವರು ತನ್ನ ಚಿತ್ತದ ಪ್ರಕಾರ ನಮಗೆ ಒಳ್ಳೇದನ್ನ ತಪ್ಪದೆ ಮಾಡುವದರಿಂದ ಆತನ ಮಹಿಮೆ ನಮ್ಮಲ್ಲಿ ಪ್ರಕಾಶಗೊಂಡು ನೋಡುವವರ ಕಣ್ಣು ಆಶ್ಚರ್ಯಮಯವಾಗಲಿ-Z '95, 121 (ಖ 1811).

* * *

ಜೂನ್ - 4

ಬಂಗಾರವು ನಾಶವಾಗುವಂಥದಾಗಿದ್ದರೂ ಅದನ್ನು ಬೆಂಕಿಯಲ್ಲಿ ಪುಟ ಹಾಕಿ ಶೋಧಿಸುವದುಂಟಷ್ಟೆ. ಬಂಗಾರಕ್ಕಿಂತ ಅಮೂಲ್ಯವಾಗಿರುವ ನಿಮ್ಮ ನಂಬಿಕೆಯು ಈ ಕಷ್ಟಗಳಿಂದ ಶೋಧಿತವಾಗಿ ಯೇಸು ಕ್ರಿಸ್ತನು ಪ್ರತ್ಯಕ್ಷನಾಗುವಾಗ ನಿಮಗೆ ಕೀರ್ತಿ ಪ್ರಭಾವ ಮಾನಗಳನ್ನು ಉಂಟುಮಾಡುವದು. -1ಪೇತ್ರ 1:7

ಈಗ ನಿಮ್ಮ ನಂಬಿಕೆ ಪರೀಕ್ಷಿಸಲ್ಪಡುತ್ತಿದೆ. ನೀವು ಪ್ರಥಮ ದಿನಗಳಲ್ಲಿ ಕೃಪೆಯೆಂಬ ಸೂರ್ಯನು ನಿಮ್ಮ ಮೇಲೆ ಪ್ರಕಾಶಿಸುತ್ತಿದ್ದ ಸಮಯದಲ್ಲಿ ನೀವು ಸತ್ಯದ ಜ್ಞಾನವೆಂಬ ಅಡಿಪಾಯವನ್ನು ಸಮಾಧಾನವಾಗಿ ತೋಡಿ ಅದರ ಮೇಲೆ ಕ್ರಿಸ್ತೀಯ ಗುಣವೆಂಬ ಕಟ್ಟಡ ಕಟ್ಟುತ್ತಿದ್ದಿರಿ. ಆದರೆ ಈಗ ನೀವು ಸಾಬೀತುಪಡಿಸಲು ಬೆಂಕಿಯಲ್ಲಿ ಶೋಧಿತರಾಗುತ್ತಿರುವಿರಿ. ಹೀಗಿರುವಲ್ಲಿ ನಿಮ್ಮ ಎಲ್ಲಾ ಬಲವನ್ನು ಕ್ರೌಢೀಕರಿಸಿ ನಿಮ್ಮ ತಾಳ್ಮೆಯನ್ನು ಭದ್ರಪಡಿಸಿ ಕಷ್ಟವನ್ನು ಸಹಿಸಲಿಕ್ಕೆ ಸಿದ್ಧರಾಗಿ ನಿಮಗಿರುವ ನಿರೀಕ್ಷೆಯನ್ನು ಗಟ್ಟಿಯಾಗಿ ಹಿಡಿದು, ನಿಮಗಾಗಿ ದೇವರು ಮಾಡಿರುವ ವಾಗ್ದಾನವನ್ನು ನಿಮ್ಮ ಮನಸ್ಸಿಗೆ

ತಂದುಕೊಂಡು ದೇವರು ಕಾದಿರಿಸಿರುವ ಮಹಾಪ್ರತಿಫಲವನ್ನು ಪಡೆಯಲಿಕ್ಕೆ ವಿಶ್ವಾಸವನ್ನು ಕಳಕೊಳ್ಳದಂತೆ ನೋಡಿಕೊಳ್ಳಿರಿ. ಸಮಾಧಾನವಾಗಿಯೂ, ವಿಶ್ವಾಸಭರಿತರಾಗಿಯೂ ಇರುವದೇ ನಿಮ್ಮ ಬಲ. ಆದದರಿಂದ, ಕ್ರಿಸ್ತನ ವಿಶ್ರಾಂತಿಯಲ್ಲಿದ್ದು ತಾಳ್ಮೆಯಿಂದಿರುವದಾದರೆ, ನಿಮ್ಮ ನಂಬಿಕೆಯ ನಿಮಿತ್ತ ಜಯಶಾಲಿಗಳಾಗುವಿರಿ.-Z-'95,135 (ಖ-1822)

* * *

ಜೂನ್ - 5

ಯೆಹೋವನೇ, ನಿನ್ನ ಮೊರೆಹೊಕ್ಕಿದ್ದೇನೆ; ನನಗೆ ಎಂದಿಗೂ ಆಶಾಭಂಗಪಡಿಸಬೇಡ.

-ಕೀರ್ತನೆ 31:1

ಕ್ರಿಸ್ತೀಯ ಭಕ್ತನಿಗೆ ನಂಬಿಕೆಯ ಮೇಲಿರುವ ಹಿಡಿತವನ್ನು ತನ್ನ ವೈರಿಗಳ ಸಮಕ್ಷಮದಲ್ಲಿ ತಾತ್ಕಾಲಿಕವಾಗಿ ಸಡಿಲಗೊಳಿಸುವದು ಹೆಚ್ಚು ಅಪಾಯಕ್ಕೆ ಕೊಂಡೊಯ್ಯುವದು. ಹಾಗೆ ಸಡಿಲಗೊಳಿಸಿದರೆ, ಕತ್ತಲೆಯು ಆವರಿಸಲು ಪ್ರಾರಂಭವಾಗಿ ತಂದೆ ದೇವರ ಪ್ರಕಾಶಿಸುವ ಮುಖವನ್ನು ನೋಡಲಿಕ್ಕಾಗುವದಿಲ್ಲ. ಸಡಿಲಬಿಟ್ಟ ನಂಬಿಕೆಯನ್ನು ಹಿಡಿಯಲು ಪ್ರಯತ್ನಿಸಿದರೂ ಕತ್ತಲೆಯ ಶಕ್ತಿಗಳು ಅವನನ್ನು ಭಯಂಕರವಾಗಿ ಆವರಿಸಿ, ಸ್ವಾಭಾವಿಕವಾದ ಮಾನವ ಸಹಜ ಅಪರಿಪೂರ್ಣತೆಯಿಂದಾಗಿ ಹೆದರಿಕೆ, ಸಂಶಯ ಅವನನ್ನು ಆಕ್ರಮಿಸುವದು. ಇವನ್ನೆಲ್ಲ ಕ್ರಿಸ್ತನು ಹೊದಿಸಿರುವ ನೀತಿ ವಸ್ತ್ರ, ಮರೆಮಾಡುವುದೆಂಬದನ್ನು ಮರೆಯಬಾರದು. ದೇವರ ಶಾಂತಿ ನಮ್ಮ ಹೃದಯಗಳನ್ನು ಆಳುವದರಿಂದ ನಾವು ಯಾವ ಸಂದರ್ಭದಲ್ಲೂ ನಂಬಿಕೆಯನ್ನು ಕಳಕೊಳ್ಳಬಾರದು ಅಥವ ಸೈತಾನನ ಭೀಕರ ಹೊಡೆತಕ್ಕೆ ನಮ್ಮ ನಂಬಿಕೆಯ ಮೇಲಿನ ಹಿಡಿತವನ್ನು ಸಡಿಲಗೊಳಿಸದೆ ನಮ್ಮ ಹೃದಯದ ಭಾಷೆ ಅಂದರೆ, ಕರ್ತನು ನನ್ನನ್ನು ಕೊಂದುಹಾಕಿದರು ನಾನು ಆತನಲ್ಲಿಟ್ಟಿರುವ ವಿಶ್ವಾಸವನ್ನು ಬಿಡುವದಿಲ್ಲ ಎಂಬುದಾಗಿರಬೇಕು.

-Z-'95, 157 (ಖ-1832).

* * *

ಜೂನ್ - 6

ನಿಮ್ಮ ವಿಷಯದಲ್ಲಿ ಜಾಗರೂಕರಾಗಿರಿ. ಅತಿ ಭೋಜನದ ಮದಡಿನಿಂದಲೂ ಅಮಲಿನಿಂದಲೂ ಪ್ರಪಂಚದ ಚಿಂತೆಗಳಿಂದಲೂ ನಿಮ್ಮ ಹೃದಯವು ಭಾರವಾಗಿರಲಾಗಿ,

-ಲೂಕ 21:34

ನಾವು ಅಮಲಿನಲ್ಲಿಲ್ಲದೆ, ಎಚ್ಚರಿಕೆ ಮತ್ತು ದೃಢ ನಿಶ್ಚಲತೆಯಿಂದ ಕೂಡಿರುವ ಈ ಕಾರ್ಯ ನಮ್ಮ ಮುಂದಿರುವದು. ಇಂತಹ ಅನಿವಾರ್ಯತೆ ಉಳ್ಳದ್ದಾಗಿದೆ ಎಂಬುದನ್ನು ನಾವು ಗ್ರಹಿಸಬೇಕಾಗಿದೆ. ಇದು ಜೀವನ ಪೂರ್ತಿ ಮಾಡುವಂತ ಕೆಲಸ. ನಮ್ಮ ಶರೀರದಲ್ಲಿ ನೆಲೆಗೊಂಡಿರುವ ಈ ವೈರಿಯ ವಿರುದ್ಧ ಜೀವನ ಪೂರ್ತಿ ಮಾಡುವ ಹೋರಾಟ ಇದಾಗಿದೆ. ಬಾಹ್ಯವಾಗಿ ಇದರ ಪ್ರಾಬಲ್ಯ ಬಲಯುತವಾದದ್ದು. ಇದಕ್ಕಿಂತ ನಮ್ಮ ಶರೀರದ ಒಳಗೆ ನೆಲೆಗೊಂಡಿರುವ ವೈರಿಯ ವಿರುದ್ಧ ಹೋರಾಡುವದು ಅತಿ ಭಯಂಕರವಾದದ್ದು. ನಾವು ಸ್ವಲ್ಪಮಟ್ಟಿಗೆ ಎಚ್ಚರ ತಪ್ಪಿ, ಇವುಗಳ ಮತ್ತಿಗೆ ಒಳಗಾದರೆ, ಅಂದರೆ, ಲೌಕಿಕವಾಗಿಯಾಗಲಿ, ಸ್ವಾರ್ಥತೆಗಾಗಲಿ, ಸೋಮಾರಿತನಕ್ಕಾಗಲಿ, ಲೌಕಿಕ ಸಂತೋಷಕ್ಕಾಗಲಿ ಅಥವ ನಮ್ಮ ಪೂರ್ವಸ್ವಭಾವ ಅಂದರೆ, ವೈರತ್ವ, ಹೊಟ್ಟೆಕಿಚ್ಚು, ಜಂಭ, ಒಣ ಹೆಮ್ಮೆ, ದುರಾಶೆ, ದುಡುಕು, ಅಹಂಕಾರ, ಸೇಡು, ಜಗಳ ಅಥವಾ ಇನ್ನಾವುದೆ ವಿಷಯದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವುದಾದರೆ, ಭಯಂಕರ ಸ್ಥಿತಿಗೆ ಒಳಗಾಗುವೆವು.-Z-'95,201 (ಖ-1859)

* * *

ಜೂನ್ - 7

ಕ್ರಿಸ್ತನಲ್ಲಿ ನಿಮ್ಮನ್ನು ತನ್ನ ನಿತ್ಯಪ್ರಭಾವಕ್ಕೆ ಕರೆದ ಕೃಪಾಪೂರ್ಣನಾದ ದೇವರು ತಾನೇ ನೀವು ಸ್ವಲ್ಪಕಾಲ ಬಾಧೆಪಟ್ಟ ಮೇಲೆ ನಿಮ್ಮನ್ನು ಯೋಗ್ಯಸ್ಥಿತಿಗೆ ತಂದು ನೆಲೆಗೊಳಿಸಿ ಬಲಪಡಿಸುವನು.

-1ಪೇತ್ರ 5:10

ಕ್ರಿಸ್ತನ ಒಳ್ಳೆಯ ಸೈನಿಕರಾಗಿ ಈ ಸ್ಥಿತಿಯನ್ನು ತಲುಪಲು ಕಷ್ಟಗಳನ್ನು ತಾಳಬೇಕಾಗುವದು. ಈ ಸ್ಥಿತಿ ಅಂದರೆ, ಪರಿಪೂರ್ಣವಾಗಿ ನಮ್ಮನ್ನು ನಾವು ಸ್ವಾಧೀನಪಡಿಸಿಕೊಳ್ಳುವದು. ಇದರಿಂದ ಕೆಟ್ಟದನ್ನು ಎದುರಿಸಲು ಸಾಮರ್ಥ್ಯವನ್ನು ಹೊಂದುವೆವು ಮತ್ತು ನಂಬಿಕೆಯಲ್ಲಿ ಸ್ಥಿರವಾಗಿದ್ದು, ತಾಳ್ಮೆ ಮತ್ತು ಸದ್ಗುಣಗಳಲ್ಲಿ ನೆಲೆಗೊಳ್ಳುವದು ಮತ್ತು ಕ್ರಿಸ್ತನು ಮಾಡಿರುವ ವಾಗ್ದಾನದಲ್ಲಿ ನಿರೀಕ್ಷೆಯನ್ನಿಟ್ಟು ಆತನ ವಿಶ್ರಾಂತಿಯಲ್ಲಿ ಸೇರುವದು. ಇದು ಅಪೋಸ್ತಲನಾದವನು ಬಹಳ ಕಾಲದಿಂದ ಕರ್ತನ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡು ಅಭಿವೃದ್ಧಿಯಾದ ಆತನ ಸ್ವಂತ ಅನುಭವವಾಗಿದೆ. ಹಾಗೆಯೇ, ಈ ಸ್ಥಿತಿಯಲ್ಲಿ ನಾವು ನೆಲೆಗೊಳ್ಳುವಂತಾಗಲಿ. ಕಳೆದುಹೋಗುವ ಪ್ರತಿ ವರುಷ ನಾವು ಹತ್ತಿರ ಹತ್ತಿರವಾಗಿ ಮಹಿಮೆಯನ್ನೊಳಗೊಂಡ ಪರಿಪೂರ್ಣಮಟ್ಟವನ್ನು ತಲುಪೋಣ.-Z-'95,202 (ಖ 1859)

* * *

ಜೂನ್ - 8

ಒಬ್ಬ ಪಾಪಿಯನ್ನು ತಪ್ಪಾದ ಮಾರ್ಗದಿಂದ ತಿರುಗಿಸಿದವನು ಅವನ ಪ್ರಾಣವನ್ನು ಮರಣಕ್ಕೆ ತಪ್ಪಿಸಿ ಬಹು ಪಾಪಗಳನ್ನು ಮುಚ್ಚಿದವನಾದನೆಂದು ತಿಳಿದುಕೊಳ್ಳಿರಿ.

-ಯಾಕೋಬ 5:20

ತಪ್ಪಾದ ಮಾರ್ಗದಲ್ಲಿ ನಡೆಯುವ ಜನರ ಮಾರ್ಗದಲ್ಲಿ ಇತರರು ನಡೆಯುತ್ತಿರುವದನ್ನು ಕಂಡರೆ, ಅವರಿಗೆ ಸಹಾಯ ಮಾಡಲು ಅವರ ಮಾರ್ಗದಲ್ಲೇ ನಾವು ನಡೆಯದೆ, ದೂರದಲ್ಲಿದ್ದು, ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಕರೆಕೊಡಬೇಕು. ಮನುಷ್ಯರು ಮಾಡುವ ಉಪದೇಶ ಮತ್ತು ಬೋಧನೆಗಳು ಗಲಿಬಿಲಿಯಾಗಿರುವದನ್ನು ನಾವು ಕಂಡಾಗ ಅವರ ಬೋಧನೆಯಲ್ಲಿ ನಾವು ನಿರತರಾಗದೆ, ಅವರು ತಾವು ಬೋಧಿಸುವ ಅಥವ ನಂಬಿರುವ ಬೋಧನೆಗಳೂ, ತತ್ವಗಳೂ ದೈವ ಬೋಧನೆಯ ಅಡಿಪಾಯ ಮತ್ತು ತತ್ವಗಳಿಗೆ ಅನುಸಾರವಾಗಿಲ್ಲದೆ ಇರುವದನ್ನು ನಾವು ತೋರಿಸಿಕೊಡಬೇಕು. ಪ್ರತಿಷ್ಠಿಸಿಕೊಂಡಿರುವ ಸಮಯವನ್ನು ಕುತರ್ಕ ವಾಗ್ವಾದಗಳಿಗೆ ಬಳಸಿಕೊಳ್ಳುವದು ವ್ಯರ್ಥ. ನಮ್ಮ ಮನಸ್ಸಾಕ್ಷಿ ಮತ್ತು ದೈವ ತತ್ವಗಳನ್ನು ಉಲ್ಲಂಘಿಸುವದು ಭಯಂಕರವಾದದ್ದು. ಏಕೆಂದರೆ, ಜನರು ಬೋಧಿಸುವ ಬೋಧನೆಗಳೂ, ತಪ್ಪಾದ ಬೋಧನೆಗಳೂ ಎಂಬುದು ನಮಗೆ ತಿಳಿದಿರುವ ಪ್ರಯುಕ್ತ ಆ ಬೋಧನೆಗಳೂ ಅಪಾಯ ತರುವದು.-Z-'05,203 (ಖ-1860).

* * *

ಜೂನ್ - 9

ಲೋಕದಲ್ಲಿ ನಿಮಗೆ ಸಂಕಟ ಉಂಟು; ಧೈರ್ಯವಾಗಿರಿ. ನಾನು ಲೋಕವನ್ನು ಜಯಿಸಿದ್ದೇನೆ ಎಂದು ಹೇಳಿದನು. -ಯೋಹಾನ 16:33

ಕರ್ತನಲ್ಲಿ ನಂಬಿಗಸ್ತರಾಗಿರುವವರಿಗೆ ಲೋಕದಲ್ಲಿ ಲೌಕಿಕವಾಗಿ ಅಭಿವೃದ್ಧಿಯಾಗುವಂತ ಯಾವ ಪ್ರತಿಫಲವಿಲ್ಲ; ಬದಲು ಸಾಯುವತನಕ ಹಿಂಸೆ, ಕಷ್ಟಗಳನ್ನು ಅನುಭವಿಸಬೇಕಿದೆ. ಕರ್ತನನ್ನು ಕುರಿತು "ಸಂಕಷ್ಟಕ್ಕೊಳಗಾದವನು ವ್ಯಾಧಿಪೀಡಿತನು" ದೇವರೇ, ನಿನ್ನನ್ನು ದೂಷಿಸಿದವರ ದೂಷಣೆಗಳು ನನ್ನ ಮೇಲೆ ಬಂದವು. ಆತನು ಐಶ್ವರ್ಯವಂತನಾಗಿದ್ದರೂ ನಮಗೋಸ್ಕರ ಬಡವನಾದನು. ಎಷ್ಟು ಬಡವನಾದನು ಅಂದರೆ, ನರಿಗಳಿಗೆ ಗುದ್ದುಗಳಿವೆ, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ. ಆದರೆ, ಮನುಷ್ಯ ಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ ಎಂಬಂತೆ ದಣಿಗಿಂತ ಆಳು ದೊಡ್ಡವನಲ್ಲ. ಅವರು ನನ್ನನ್ನು ಹಿಂಸೆಪಡಿಸಿದರೆ, ನಿಮ್ಮನ್ನೂ ಸಹ ಹಿಂಸೆಪಡಿಸುವರು. ದೂಷಿಸಿದವರ ದೂಷಣೆಗಳೂ ಕರ್ತನ ಮೇಲೆ ಬಂದಂತೆ ನಮ್ಮ ಮೇಲೂ ಬರುವದು. ಈಗ ಕ್ರಿಸ್ತನ ಅನುಯಾಯಿಗಳಿಗೆ ದೊರಕುವ ಬಹುಮಾನ ಕರ್ತನ ಹೃದಯಪೂರ್ವಕ ಪ್ರಕಾಶ ಆತನ ಅಪಾರವಾದ ಪ್ರೀತಿ ಮತ್ತು ಅನುಮೋದನೆ. -Z-'95,207 (ಖ-4071)

* * *

ಜೂನ್ - 10

ನಮಗೂ ಪ್ರಾರ್ಥನೆ ಮಾಡುವುದನ್ನು ಕಲಿಸು. -ಲೂಕ 11:1

ದೇವರು ಅನುಮೋದಿಸುವಂತೆ ನಮ್ಮ ಪ್ರಾರ್ಥನೆಯು ಸಂಕ್ಷಿಪ್ತವಾಗಿರಬೇಕು, ದೃಢ ನಂಬಿಕೆಯಿಂದ ಕೂಡಿರಬೇಕು.  ಪ್ರೀತಿ ಮತ್ತು ಭಯ, ದೈವ ಯೋಜನೆಯ ಬಗ್ಗೆ ಪೂರ್ಣ ಅನುಕಂಪ, ದೈವ ಚಿತ್ತಕ್ಕೆ ನಮ್ಮನ್ನು ಒಳಪಡಿಸುವದು, ಮಕ್ಕಳಂತೆ ದೇವರನ್ನು ಆತುಕೊಳ್ಳುವದು, ನಮ್ಮ ಪಾಪಗಳನ್ನು ಒಪ್ಪಿಕೊಳ್ಳುವದು ಮತ್ತು ಪಾಪಗಳ ಕ್ಷಮಾಪಣೆ ಕೇಳಿ ದೈವಾನುಗ್ರಹ, ನಡೆಸುವಿಕೆ ಮತ್ತು ನಮ್ಮನ್ನು ಕಾಪಾಡುವಂತೆ ಧೀನಭಾವದಿಂದ ಹಂಬಲಿಸುವದು.  ಇಷ್ಟೆಲ್ಲವನ್ನು ನಾವು ಯಾವಾಗಲೂ ನಮ್ಮ ಮಾತುಗಳಲ್ಲಿ ಕೇಳಿಕೊಳ್ಳಲಾಗುವದಿಲ್ಲ.  ಆದರೂ ಕೊನೆಯ ಪಕ್ಷ ಇದು ನಮ್ಮ ಆತ್ಮದ ಬಯಕೆಯಾಗಿರಬೇಕು.

ಪ್ರಾರ್ಥನೆಯೆಂದರೆ, ನಮ್ಮ ಆತ್ಮದ ಪ್ರಾಮಾಣಿಕ ಆಶೆ ಎಂಬದೆ.  ಅದು ಮಾತುಗಳಿಂದ ಇಲ್ಲವೆ ಮನಸ್ಸಿನಲ್ಲಿ ಕೇಳಿಕೊಳ್ಳುವದಾಗಿದೆ.-Z-'95,213 (ಖ-1864)

* * *

ಜೂನ್ - 11

ಸಹೋದರರೇ, ನಾನಂತೂ ಹಿಡಿದುಕೊಂಡವನೆಂದು ನನ್ನನ್ನು ಈ ವರೆಗೂ ಎಣಿಸಿಕೊಳ್ಳುವದಿಲ್ಲ.
-ಫಿಲಿಪ್ಪಿ 3:13

ಯಾವನಾದರೂ ತಾನು ಆತ್ಮೀಯವಾಗಿ ತೃಪ್ತಿಕರವಾದ ಪ್ರಮಾಣವನ್ನು ತಲುಪಿದ್ದೇನೆ ಎಂಬದಾಗಿ ಭಾವಿಸಿದರೆ, ಆ ಗಳಿಗೆಯಿಂದ ಅವನ ಆತ್ಮೀಯ ಅವನತಿ ಪ್ರಾರಂಭವಾಗುವದು.  ನಮ್ಮ ಮುಂದಿರುವ ಪರಿಪೂರ್ಣ ಮಾದರಿಯನ್ನು ನೋಡಿ ಅದನ್ನು ನಕಲು ಮಾಡಲು ಪ್ರಯಾಸಪಡುತ್ತಿರುವವನು, ಈಗ ಕ್ರಿಸ್ತನ ಪ್ರಾಮಾಣಿಕ ಅನುಯಾಯಿಯಾಗಿ ತಲುಪಿರುವ ಪ್ರಮಾಣ ತೃಪ್ತಿಕರವಾಗಿದೆ ಎಂಬುದಾಗಿ ಹೇಳುವುದಿಲ್ಲ. ಯಾವಾಗ ಕ್ರಿಸ್ತನನ್ನು ದೃಷ್ಟಿಸದೆ ನಮ್ಮ ಗಮನವನ್ನು ಬೇರೆಡೆಗೆ ತಿರುಗಿಸುತ್ತೇವೆಯೋ ಆಗ ಸ್ವಾರ್ಥ ಸಂತೃಪ್ತಿಪಡುವದಾಗಿದೆ.  ಆದರೆ, ನಮ್ಮ ಪರಿಪೂರ್ಣ ಮಾದರಿಯಾಗಿರುವ ಕ್ರಿಸ್ತನನ್ನು ಸಂಪೂರ್ಣವಾಗಿ ದೃಷ್ಟಿಸುವದಾದರೆ, ನಮ್ಮ ಎಲ್ಲಾ ನ್ಯೂನತೆಗಳು ಸ್ಪಷ್ಟವಾಗಿ ತೋರಿಬರುತ್ತದೆ.  ನಾವು ಜಂಭದ ಮನೋಭಾವವುಳ್ಳವರಾಗಿ ನಮ್ಮ ನ್ಯೂನತೆಗಳನ್ನು ಕಡೆಗಣಿಸುವದಾದರೆ, ಆಗ ಈ ನ್ಯೂನತೆಗಳೂ ಇತರರಿಗೆ ಸ್ಪಷ್ಟವಾಗಿ ಕಾಣಬರುವದು.  ಹೀಗಿರುವಲ್ಲಿ ಕ್ರಿಸ್ತನಂತೆ ಆಗಲು ಪ್ರಯಾಸಪಟ್ಟು ಆ ಗುರಿಯನ್ನು ತಲುಪಲು ದಿನೇ ದಿನೇ ವೃದ್ದಿಯಾಗುವದನ್ನು ಸಿದ್ದಿಗೆ ತಂದಾಗ ಅವನು ಕ್ರಿಸ್ತನಲ್ಲಿ ತೃಪ್ತಿಯನ್ನು ಕಾಣುವನು.-Z-'95,250 (ಖ-1884)

* * *

ಜೂನ್ - 12

ಆದರೆ ಒಂದು, ನಾನು ಹಿಂದಿನ ಸಂಗತಿಗಳನ್ನು ಮರೆತು ಬಿಟ್ಟು...

-ಫಿಲಿಪ್ಪಿ 3:13

ಆದರೆ, ನಾನು 'ಒಂದು ಸಂಗತಿ' ಯನ್ನು ಮಾಡುತ್ತೇನೆ. ಅಪೋಸ್ತಲನಲ್ಲಿ ನಾವು ಕಾಣುವ ಈ ಉದ್ದೇಶ, ಒಂದೇ ಉದ್ದೇಶ. ಆತನು ಅನೇಕ ಕೆಲಸಗಳನ್ನು ಮಾಡಲಿಲ್ಲ. ಹಾಗೆ ಮಾಡಿದ್ದ ಪಕ್ಷಕ್ಕೆ ಅವನು ಅಪಜಯ ಹೊಂದುತ್ತಿದ್ದ. ಈತನನ್ನು ಕರೆದ ಆ ಒಂದೇ ಉದ್ದೇಶಕ್ಕಾಗಿ ತನ್ನ ಜೀವವನ್ನೆ ಮುಡುಪಾಗಿಟ್ಟು ಬೇರೆ ಎಲ್ಲಾ ವಿಷಯಗಳ ಅಥವ ಗುರಿಗಳನ್ನು ಕೈಬಿಟ್ಟು ತಾನು ಆರಿಸಿಕೊಂಡಿರುವ ಈ ಒಂದು ಉದ್ದೇಶದಿಂದ ತನ್ನ ಜೀವಮಾನ ಪೂರ್ತಿ ಇದರ ಪ್ರಯುಕ್ತ ನಷ್ಟ, ಒಂಟಿತನ, ಕಷ್ಟ, ಚಿಂತೆ, ಹಿಂಸೆ ಮತ್ತು ಎಡಬಿಡದೆ ದೂಷಣೆ ಉಂಟಾಗುವದು ಎಂಬುದು ತಿಳಿದಿದ್ದರೂ ತನ್ನ ಉದ್ದೇಶವನ್ನು ಬಿಡಲಿಲ್ಲ. ಈ ಒಂದೇ ಉದ್ದೇಶವನ್ನ ಆರಿಸಿಕೊಂಡ ಪ್ರಯುಕ್ತ ಈಗಿನ ಜೀವನದಲ್ಲಿ ಸ್ವಾಭಾವಿಕವಾಗಿ ದೊರಕುವ ಒಳ್ಳೆಯ ವಿಷಯಗಳನ್ನು ಮತ್ತು ಅವುಗಳನ್ನು ಪಡೆಯಲು ಮಾಡುವ ಪ್ರಯತ್ನ ಇವುಗಳಿಂದಾಗುವ ಶೋಧನೆಗಳನ್ನು ಬದಿಗಿಟ್ಟನು.-Z-'95,250 (ಖ-1884)

* * *

ಜೂನ್ - 13

ಎಚ್ಚೆತ್ತಾಗ ನಿನ್ನ ಸ್ವರೂಪದರ್ಶನದಿಂದ ತೃಪ್ತನಾಗುವನಾಗಿರುವೆನು.

-ಕೀರ್ತನೆ 17:15

ಉನ್ನತವಾದ ರೆಕ್ಕೆಗಳನ್ನು ಹೊಂದಿರುವ ಈ ನಮ್ಮ ಯೋಚನೆಗಳು,

ಗಣನೆಗೆ ಬಾರದ ಈ ಲೋಕದ ಚಿಂತೆಗಳಿಂದ ಮೇಲಕ್ಕೇರಿ

ನಮ್ಮನ್ನು ಬೇರ್ಪಡಿಸುವ ತೆರೆಯನ್ನು ಪಕ್ಕಕ್ಕೆ ಸರಿಸಿ

ನಿರಂತರ ಮಹಿಮಾ ಸ್ಥಿತಿಯನ್ನು ಕಾಣುವಂತಾಗಲಿ.

ದೇವರ, ಕ್ರಿಸ್ತನ ಮತ್ತು ಹಿಂದಿದ್ದ, ಈಗಿರುವ ಸಂತರ ಬಗ್ಗೆ ಮಾಡುವ ಯೋಚನೆ. ಅಂದರೆ, ರಾಜ್ಯವನ್ನು ಪಡೆಯುವದು, ಭವಿಷ್ಯದಲ್ಲಿ ಕ್ರಿಸ್ತನೊಂದಿಗೆ ಜೊತೆಗೂಡಿ ನಿರ್ವಹಿಸುವ ಆಶೀರ್ವಾದದಿಂದ ತುಂಬಿರುವ ಕಾರ್ಯ, ಘನವಾದ ಮತ್ತು ಅನುಗ್ರಹಪೂರಿತವಾದ ದೈವ ಯೋಜನೆ, ನಮ್ಮ ಈಗಿನ ಜೀವನದ ಉದ್ದೇಶ ಕಾರ್ಯ ಪೂರೈಸಿ ಕ್ರಿಸ್ತನೊಂದಿಗೆ ಮಹಿಮಾ ಪದವಿಯಲ್ಲಿ ಸೇರುವ ಆ ಆಶೀರ್ವಾದಗಳನ್ನು ಕುರಿತು ಮಾಡುವ ಯೋಚನೆ ನಮ್ಮ ಮನಸ್ಸು ಮತ್ತು ಹೃದಯವನ್ನು ಪ್ರೇರೇಪಿಸುವದು. ಇವುಗಳ ಸಂಗಡ ದೇವರೊಂದಿಗೆ ವ್ಯಕ್ತಿಗತವಾಗಿ ದೊರೆಯುವ ಸಂಪರ್ಕ ಮತ್ತು ಅನ್ಯೋನ್ಯತೆ, ನಮ್ಮ ಪ್ರಾರ್ಥನೆ ಮತ್ತು

ಒಂದೇ ಮನಸ್ಸು, ಉದ್ದೇಶವಿರುವ ಸಹೋದರರ ಜೊತೆಗೂಡಿ ದೇವರನ್ನು ಕೊಂಡಾಡುವದು ಎಷ್ಟೋ ಅಮೋಘವಾದದ್ದು.-Z-'95,251 (ಖ-1884).

* * *

ಜೂನ್ - 14

ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ.
-1 ಪೇತ್ರ 5:5

ಪ್ರಿಯರೆ, ಎಲ್ಲಾದಕ್ಕಿಂತಲೂ ಮೇಲೆ ನಾವು ಧೀನತೆಯನ್ನು ಕಾಪಾಡಿಕೊಳ್ಳೋಣ. ನಮ್ಮ ದೃಷ್ಟಿಯಲ್ಲಿ ನಾವು ಚಿಕ್ಕವರಾಗಿ ಕಾಣಿಸಿಕೊಂಡರೆ, ದೇವರು ನಮ್ಮ ಸುರಕ್ಷತೆಯನ್ನೊಳಗೊಂಡಂತೆ ನಮ್ಮನ್ನು ತಮ್ಮ ಚಿತ್ತದ ಪ್ರಕಾರ ಉಪಯೋಗಿಸುವನು. ಆದಾಗ್ಯೂ ನಮ್ಮ ಪ್ರಾಮಾಣಿಕತೆಯ ಪರೀಕ್ಷೆ ಬಂದಾಗ ನಮಗೆ ಮರೆಯಾಗಿರುವನು. ಒಂದು ವೇಳೆ ಈ ದಿನ ಕರ್ತನು ನಿಮ್ಮನ್ನು ಹುರಿದುಂಬಿಸಿ ಆತನ ಸೇವೆಯಲ್ಲಿ ಅಲ್ಪಸ್ವಲ್ಪ ಪ್ರೋತ್ಸಾಹವನ್ನು ಕೊಟ್ಟರೆ, ಅದನ್ನು ನಮ್ರತೆಯಿಂದಲೂ, ಧೀನತೆಯಿಂದಲೂ ಸ್ವೀಕರಿಸಿ ನೀವು ನಿಮ್ಮ ಅಯೋಗ್ಯತೆ, ಅಪರಿಪೂರ್ಣತೆಯನ್ನು ನೆನಪು ಮಾಡಿಕೊಂಡು ದೇವರೆ ತನ್ನ ಕಾರ್ಯವನ್ನು ನಿಮ್ಮಲ್ಲಿ ನಿರ್ವಹಿಸುತ್ತಿರುವೆನೆಂದು ತಿಳಿಯಿರಿ. ಹಾಗೆಯೇ, ನಾಳೆ ನೀವು ಅವಮಾನ ನಿಂದೆಯನ್ನು ಅಂಗೀಕರಿಸಲು ಸಿದ್ಧರಾಗಿರ್ರಿ, ಯಾಕಂದರೆ, ನಿಮ್ಮ ಗುಣ ಸಮತೋಲನಕ್ಕಾಗಿ ಇವುಗಳೂ ನಿಮ್ಮ ಜೀವನದಲ್ಲಿ ಸಂಭವಿಸುತ್ತಿರುತ್ತವೆ. ಆದರೆ, ನೆನ್ನೆಯ ದಿನದಲ್ಲಾದ ಜಯ ಈ ದಿನದಲ್ಲಾದ ನಿಂದೆ ಅವಮಾನಗಳ ದೆಸೆಯಿಂದ ಹೆದರಿದರೆ, ನೀವು ಸಮರ್ಪಕವಾದ ರೀತಿಯಲ್ಲಿ ಆತ್ಮೀಯವಾಗಿ ಅಭಿವೃದ್ಧಿಯಾಗಿಲ್ಲದಂತೆ ಇರುವದು ಕಂಡುಬರುವದು.-Z-'96,19 (ಖ- 1919).

* * *

ಜೂನ್ - 15

ದಾವೀದನಿಗೆ ಖಂಡಿತವಾಗಿ ವಾಗ್ದಾನಮಾಡಿದ ಕೃಪಾವರಗಳನ್ನು ನಿಮಗೆ ಕೊಡುತ್ತೇನೆಂಬ ಶಾಶ್ವತವಾದ ಒಡಂಬಡಿಕೆಯನ್ನು ನಿಮ್ಮೊಂದಿಗೆ ಮಾಡಿಕೊಳ್ಳುವೆನು.

-ಯೆಶಾಯ 55:3

ನೀತಿಗಾಗಿ ಹಸಿದು ಬಾಯಾರಿದವರೆಲ್ಲರೂ, ಬಾಯಾರಿದ ಜಿಂಕೆಯು ನೀರಿನ ತೊರೆಗಳನ್ನು ಹೇಗೋ ಹಾಗೆಯೇ ದೇವರನ್ನು ಬಯಸುವರಾಗಿ ಆತನನ್ನು ಕಂಡುಕೊಂಡು ತಮ್ಮನ್ನು ದೇವರಿಗೆ ಪ್ರತಿಷ್ಠೆಪಡಿಸಿಕೊಂಡು, ಪವಿತ್ರಾತ್ಮ ಹೊಂದಿದವರಾಗಿ, ಆ ಆತ್ಮನಿಂದ ದೇವರ ಮಕ್ಕಳೆಂಬ ಸಾಕ್ಷಿಯನ್ನು ಪಡೆದು, ಆತ್ಮಾಭಿಷೇಕ ಹೊಂದಿರುವ ಮಕ್ಕಳೆಂಬದನ್ನು ತಮ್ಮಲ್ಲೆ ಕಂಡುಕೊಂಡು, ಪ್ರಾಮಾಣಿಕತೆ,

ನಂಬಿಗಸ್ತಿಕೆಯಿಂದ ಉತ್ಸಾಹಭರಿತರಾಗಿ ಬಲದಿಂದಲೂ, ಧÉೖರ್ಯದಿಂದಲೂ ವಿವೇಚನೆಯಿಂದ ಕೂಡಿರುವ ಕರ್ತನ ಜನರಾದ ಇವರೊಂದಿಗೆ ದಾವಿದನ ಕೃಪಾ ವರಗಳನ್ನೊಳಗೊಂಡ ಶಾಶ್ವತವಾದ ಒಡಂಬಡಿಕೆಯನ್ನು ದೇವರು ಮಾಡಿಕೊಂಡಿದ್ದಾನೆ.-Z-'96,29 (ಖ-1936).

* * *

ಜೂನ್ - 16

ಯಾವ ಶಿಕ್ಷೆಯಾದರೂ ತತ್ಕಾಲಕ್ಕೆ ಸಂತೋಷಕರವಾಗಿ ತೋಚದೆ ದುಃಖಕರವಾಗಿ ತೋಚುತ್ತದೆ. ಆದರೂ ತರುವಾಯ ಅದು ಶಿಕ್ಷೆ ಹೊಂದಿದವರಿಗೆ ನೀತಿಯೆಂಬ ಫಲವನ್ನು ಕೊಟ್ಟು ಮನಸ್ಸಿಗೆ ಸಮಾಧಾನವನ್ನು ಉಂಟುಮಾಡುತ್ತದೆ. -ಇಬ್ರಿಯ 12:11

ಈ ತರಹದ ಶಿಕ್ಷಣದಿಂದ ಆತ್ಮವು ಸಂತೋಷವಾಗಿ ತನ್ನನ್ನೇ ಪ್ರೀತಿಯಿಂದ ದೇವರಿಗೆ ಒಪ್ಪಿಸಿ ಸಮಾಧಾನವಾಗಿ ಹೇಳುವದೇನಂದರೆ, ಕ್ರಿಸ್ತನು ನನ್ನನ್ನು ಬಲಪಡಿಸುವದರಿಂದ ನಾನು ಎಲ್ಲವನ್ನು ಮಾಡುತ್ತೇನೆ, ಎಲ್ಲವನ್ನು ಸಹಿಸಿಕೊಳ್ಳುತ್ತೇನೆ ಎಂಬದಾಗಿ ಹಳೆ ಸ್ವಭಾವದ ಎಲ್ಲಾ ಕೊಳೆಯು ನಿಧಾನವಾಗಿ ಕರಗಿ ಚಿನ್ನದಂತ ಗುಣ ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗಿ ಗೋಚರಿಸುವದು. ಇಂತಹ ಆತ್ಮಗಳೂ ಕರ್ತನಿಗೆ ಅತಿ ಪ್ರಿಯವಾಗಿರುವದು. ಕೃಪಾಪೂರ್ಣನಾದ ಕರ್ತನು ಇಂತಹವರ ಹತ್ತಿರವಿದ್ದು, ಅವರ ಪ್ರತಿಯೊಂದು ತೊಂದರೆ ಇಕ್ಕಟ್ಟು ಮತ್ತು ಅತಿ ದುಃಖದಲ್ಲಿರುವಾಗ ಅವರಿಗೆ ಸಾಂತ್ವನ ಹೇಳಿ ಹುರಿದುಂಬಿಸುವನು. ಈ ದುಃಖ ಅವರ ನೆನಪಿನ ಗೌರವಾನ್ವಿತ ಶಾಂತಿಧಾಮವಾಗಿ ಪರಿಣಮಿಸಿ, ಅಲ್ಲಿ ಮುಂಜಾನೆಯ ನಕ್ಷತ್ರ ಬಹಳ ದೀದಿಪ್ಯಮಾನವಾಗಿ ಪ್ರಕಾಶಿಸುವದು.-Z-'96,44 (ಖ-1943)

* * *

ಜೂನ್ - 17

ಆತನು ಬರುವ ದಿನವನ್ನು ಯಾರು ತಾಳಾರು? ಆತನು ಕಾಣಿಸಿಕೊಳ್ಳುವಾಗ ಯಾರು ನಿಂತಾರು? ಆತನು ಅಕ್ಕಸಾಲಿಗನ ಬೆಂಕಿಗೂ ............. ಬೆಳ್ಳಿಯನ್ನು ಶೋಧಿಸುವ ಅಕ್ಕಸಾಲಿಗನಂತೆ ಕುಳಿತು ಬೆಳ್ಳಿ ಬಂಗಾರಗಳನ್ನೋ ಎಂಬಂತೆ ಶುದ್ದೀಕರಿಸುವನು. -ಮಲಾಕಿ 3:2,3

ಮಹಾ ಅಕ್ಕಸಾಲಿಗನು ಬಂಗಾರದಂತಿರುವ ನಿಮ್ಮ ಗುಣ ಹೇಗೆ ಆತನ ಸಾರೂಪ್ಯವನ್ನು ಪ್ರತಿಬಿಂಬಿಸುತ್ತದೆ ಎಂಬದನ್ನು ಗಮನಿಸುತ್ತಿರುವನು. ನಮಗೊದಗುವ ಪ್ರತಿಯೊಂದು ಪರೀಕ್ಷೆಯಲ್ಲಿ ನಮ್ಮ ಕ್ರಿಯೆಗಳನ್ನು ಯಾವದು ಪ್ರಭಾವಯುತವಾಗಿ ನಿಯಂತ್ರಿಸುತ್ತದೆ ಎಂಬದನ್ನು ವೀಕ್ಷಿಸುತ್ತಿರುವನು. ಈ ಪ್ರಭಾವ ಈಗಿನ ಅನುಕೂಲತೆಗಳೋ ಅಥವ ಲೌಕಿಕ ಧೋರಣೆಯೋ Àವೈಯಕ್ತಿಕ ಸ್ನೇಹವೇ ಆಗಿರಲಿ ಅಥವ ಲೌಕಿಕ ಪ್ರೀತಿ ಅದು ಗಂಡನ ಮೇಲೆ, ಹೆಂಡತಿಯ ಮೇಲೆ ಅಥವ ಮಕ್ಕಳ ಮೇಲೆ ಅಥವ ಅರಾಮವಾಗಿರುವುದೋ ಅಥವ ನಷ್ಟವಾದರೂ ಸಮಾಧಾನವಾಗಿರುವುದೋ ಅಥವ ಇವೆಲ್ಲವುಗಳನ್ನು

ಬಿಟ್ಟು ಸತ್ಯ ಮತ್ತು ನೀತಿಯನ್ನೊಳಗೊಂಡ ನಗ್ನ ಸಿದ್ಧಾಂತಗಳು, ಬೋಧನೆಗಳು, ತತ್ವಗಳೂ ಇವುಗಳ ಪ್ರಭಾವ ನಿನ್ನನ್ನು ನಿಯಂತ್ರಿಸುತ್ತದೆಯೋ, ಎಂದು ತಿಳಿಯಲು ಈ ಸಿದ್ಧಾಂತಗಳನ್ನು ತತ್ವಗಳನ್ನು ನಾವು ಅರಿಯಲು ನಮ್ಮ ಸಾಮರ್ಥ್ಯ ಮತ್ತು ಶಕ್ತಿಯಿಂದ ಕೂಡಿದ್ದು, ಉತ್ಸುಕರಾಗಿ ಅವುಗಳನ್ನು ಏನೇ ಆದರೂ ಎಷ್ಟೇ ನಷ್ಟವಾದರೂ ಅಥವ ಹಿಂಸೆ ಬಂದರು ಅಥವ ಇವೆಲ್ಲವುಗಳೂ ಒಟ್ಟಿಗೆ ಸೇರಿ ನಮ್ಮ ಮೇಲೆ ಎರಗಿದರೂ ನಾವು ಸತ್ಯ, ನೀತಿ ಮತ್ತು ನಂಬಿಕೆಯನ್ನು ಬಿಡದೆ ಅವುಗಳನ್ನು ರಕ್ಷಿಸಿಕೊಳ್ಳಲು ಅವುಗಳ ಪರವಾಗಿ ಸಾಯುವತನಕ ಈ ಕಠಿಣ ಯುದ್ಧವನ್ನು ಮಾಡುತ್ತೇವೆ.-Z-'96,45 (ಖ-1943)

* * *

ಜೂನ್ - 18

ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯವಿದೆ.

-ಕೀರ್ತನೆಗಳು 16:11

ನಾವು ಯಾವ ಸ್ಥಿತಿಯಲ್ಲೇ ಇರಲಿ ಕರ್ತನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ. ಕರ್ತನ ಸಹವಾಸದಲ್ಲಿರಲು ನಾವು ಹೆಚ್ಚಿಗೆ ಪ್ರಯಾಸಪಡೋಣ. ಪ್ರಾರ್ಥನೆಯ ಮೂಲಕ ಹತ್ತಿರ ಹೋಗೋಣ. ಆತನ ಅಮೂಲ್ಯ ವಾಕ್ಯಗಳನ್ನು ಅಧ್ಯಯನ ಮಾಡುವದರ ಮೂಲಕ, ಆತನ ಒಳ್ಳೇತನವನ್ನು ಮೆಲುಕು ಹಾಕುವದರ ಮೂಲಕ, ಆತನ ಅನುಗ್ರಹಪೂರಿತ ಪರಾಮರಿಕೆ, ನಮ್ಮ ವೈಯಕ್ತಿಕ ಅನುಭವದಲ್ಲಿ ಆತನ ಕೃಪಾ ವರದಾನಗಳು ಪ್ರಕಟಗೊಂಡುದರ ಪರಿಣಾಮವಾಗಿ ಆತನ ಸನಿಹದಲ್ಲಿರಲು ಪ್ರಯತ್ನಿಸೋಣ. ಆತನು ಮಾಡಿರುವ ಎಲ್ಲಾ ಅಮೂಲ್ಯ ವಾಗ್ದಾನಗಳು ಸತ್ಯವಾಗಿರುವಂತಹವು ಹಾಗೂ ಆತನಲ್ಲಿ ನೆರವೇರುವವುಗಳಾಗಿವೆ. ಹೀಗಿರುವದರಿಂದ ನೀವು ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು. (ಯಾಕೋಬ 4:8) ಆತನು ತಾನೇ ಕಾಣಿಸಿಕೊಂಡು ನಿನ್ನ ಜೊತೆಯಲ್ಲಿ ವಾಸಮಾಡುವನು. ದೇವರ ಚಿತ್ತವೇನಂದರೆ, ಆತನ ಮಕ್ಕಳೆಲ್ಲರೂ ಆತನಲ್ಲಿ ಸಂತೋಷಪಡಬೇಕು. ಯಾವಾಗಲು ಸಂತೋಷಿಸಬೇಕು. ಯಾವನಿಗಾದರು ಈ ಆಶೀರ್ವಾದದ ಕೊರತೆ ಇದ್ದರೆ, ಅವನು ದೇವರು ದಯಪಾಲಿಸಿರುವ ಅವಕಾಶದ ಕೆಳಮಟ್ಟದಲ್ಲಿರುವನು.-Z-'96,54 (ಖ-1948)

* * *

ಜೂನ್ - 19

ನೀತಿವಂತರಿಗೋಸ್ಕರ ಪ್ರಕಾಶವೂ (ಸತ್ಯ) ಯಥಾರ್ಥ ಹೃದಯವುಳ್ಳವರಿಗೆ ಸಂತೋಷವೂ ಬಿತ್ತಲ್ಪಟ್ಟಿವೆ.

-ಕೀರ್ತನೆಗಳು 97:11

ದೇವರ ಸತ್ಯ ಮಕ್ಕಳು ಸತ್ಯವನ್ನು ಪ್ರೀತಿಸುವರು. ಯಾಕಂದರೆ, ಅದು ಅವರನ್ನು ಆಕರ್ಷಿಸಿದೆ. ಯಾವಾಗ ಅವರು ಸತ್ಯವನ್ನು ಕಂಡುಕೊಂಡರೋ ಆಗ ಅವರು ಅದರ ಮಹತ್ವವನ್ನ ಗಣನೆಗೆ ತೆಗೆದುಕೊಂಡು ಅದರ ಮೌಲ್ಯವನ್ನು ಅರಿತು ಸತ್ಯವನ್ನು ಧ್ಯಾನಿಸುವರು. ಅವರು ಹೇಳುವದೇನಂದರೆ, ಸತ್ಯವು ದೇವರಂತೆಯೆ. ಇದು ದೇವರ ಅಮೋಘವಾದ ಒಳ್ಳೆಯತನವನ್ನು ಪ್ರಕಟಿಸುತ್ತೆ. ಇದು ದೇವರ ಗುಣಗಳಾದ ಪ್ರೀತಿ, ಜ್ಞಾನ, ದಯೆಗಳನ್ನು ಪ್ರತಿಬಿಂಬಿಸುತ್ತದೆ. ಆದುದರಿಂದ ಭಕ್ತರು ಸತ್ಯವನ್ನು, ಅದನ್ನು ದಯಪಾಲಿಸಿದ ದೇವರನ್ನು ಪ್ರೀತಿಸುತ್ತಾರೆ. ಅದನ್ನು ಅಮೂಲ್ಯ ರತ್ನವೊ ಎಂಬಂತೆ ತಮ್ಮ ಹೃದಯದಲ್ಲಿ ಅಡಗಿಸಿಟ್ಟು ಅದನ್ನು ಪ್ರತಿಸಮಯದಲ್ಲೂ ಬಾಯಿಪಾಠ ಮಾಡುತ್ತಾರೆ. ಅವರು ಅದರ ಬಗ್ಗೆ ಗಮನ ಕೊಟ್ಟು ಅದರ ಸಮ ಸೂತ್ರತೆ, ಸೌಂದರ್ಯವನ್ನು ಕೊಂಡಾಡುವವರಾಗಿ ಅವರ ಗುಣವನ್ನು ಅದರ ಸೌಂದರ್ಯ ಸಮಸೂತ್ರತೆಗೆ ತಕ್ಕಂತೆ ಮಾರ್ಪಡಿಸಿಕೊಳ್ಳಲು ಹೆಚ್ಚು ಹೆಚ್ಚಾಗಿ ಪ್ರಯಾಸಪಟ್ಟು ಪಡೆದು ಆದಷ್ಟುಮಟ್ಟಿಗೆ ವಾಕ್ಯ ಮತ್ತು ನಡವಳಿಕೆಯನ್ನು ಅಭ್ಯಾಸಮಾಡಿ, ಇತರರೂ ಕೂಡ ಈ ಆಶೀರ್ವಾದವನ್ನು ಪಡೆಯುವಂತೆ ಪ್ರಯತ್ನಿಸುವರು.-Z-'96,55 (ಖ-1949)

* * *

ಜೂನ್ - 20

ಲೋಕವನ್ನಾಗಲಿ, ಲೋಕದಲ್ಲಿರುವವುಗಳನ್ನಾಗಲೀ ಪ್ರೀತಿಸಬೇಡಿರಿ. ಯಾವನಾದರೂ ಲೋಕವನ್ನು ಪ್ರೀತಿಸಿದರೆ, ತಂದೆಯ ಮೇಲಣ ಪ್ರೀತಿಯು ಅವನಲ್ಲಿಲ್ಲ.

-1ಯೋಹಾನ 2:15

ಲೋಕವನ್ನು ಪ್ರೀತಿಸುವುದೆಂದರೆ, ಲೋಕದ ಉದ್ದೇಶ ಹಾವಭಾವಗಳಿಗನುಸಾರ ನಡೆಯುವದಾಗಿದೆ. ಈ ರೀತಿ ನಾವು ಅದನ್ನ ಪ್ರೀತಿಸುವದಿಲ್ಲ. ಅದಕ್ಕೆ ವಿರುದ್ಧವಾಗಿ ಅದನ್ನು ಬಿಟ್ಟು ನಡೆಯುವೆವು. ನಮಗೆ ತಿಳಿದಿರುವ ಮಾರ್ಗ ಕೆಲವು ವಿಷಯಗಳನ್ನು ಹೊರತುಪಡಿಸಿದರೆ, ಕಷ್ಟಕರವಾದ ಮಾರ್ಗ ಮತ್ತು ಅದು ವಿಭಿನ್ನ ಮಾರ್ಗ. ಆದರೆ, ಅದು ಸಮಾಧಾನ ಮತ್ತು ಸಂತೋಷ ಕೊಡುವ ಒಂದೇ ಮಾರ್ಗವಾಗಿದೆ. ಈ ಲೋಕವು ಅದರ ಆಶಾಪಾಶಗಳು ಅತೀ ವೇಗದಲ್ಲಿ ನಶಿಸಿ ಹೋಗುತ್ತಿದೆ. ಇದು ಕುಸಿಯುತ್ತಿರುವ ಮತ್ತು ಅತೃಪ್ತಿಯಿಂದ ಕೂಡಿ ಕೊನೆಗೆ ನಾಶಕ್ಕೆ ಕೊಂಡೊಯ್ಯುವಂತದ್ದು, ಯಾರು ಕರ್ತನ ಮಾರ್ಗದಲ್ಲಿ ನಡೆಯುತ್ತಾ ಸಂತೋಷವುಳ್ಳವರಾಗಿರುವರೋ ಅಂಥವರು ಕರ್ತನ ಸಹವಾಸ ಅನ್ಯೋನ್ಯತೆಯ ಆಶೀರ್ವಾದವನ್ನು ಪಡೆಯುವರು ಅಂಥವರು ಉತ್ಕøಷ್ಟವಾದ ಜೀವನ, ಶುದ್ದ ಹಾಗೂ ನಿರ್ಮಲ ವಾತಾವರಣದಲ್ಲಿದ್ದು ಪವಿತ್ರ ಮತ್ತು ಸವಿಯುಳ್ಳ ಶಾಂತಿಯುತವಾದ ಸ್ಥಿತಿಯಲ್ಲಿ ಆನಂದಿಸುವರು. ಇಂತಹ ಆನಂದವನ್ನು ಸಂತೋಷವನ್ನು ಈ ಲೋಕವು ಕೊಡಲಾರದು.-Z-'96,67 (ಖ-1955)

* * *

ಜೂನ್ - 21

ನಾನು ಸಾತ್ವಿಕನೂ, ದೀನ ಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ.

-ಮತ್ತಾಯ 11:29

ನೆಮ್ಮದಿಯ ರಹಸ್ಯ ನಿಜವಾಗಿಯೂ ದೀನ ಮತ್ತು ಶಾಂತ ಸ್ವಭಾವದಲ್ಲಿದೆ. ದೀನನಾಗಿರುವುದು ಅಂದರೆ, ಶಾಂತ ಸ್ವಭಾವವನ್ನ ಅಭ್ಯಾಸ ಮಾಡುವದು ಮತ್ತು ಪ್ರೀತಿಯಿಂದ ದೇವರ ಚಿತ್ತಕ್ಕೆ ತನ್ನನ್ನು ಒಪ್ಪಿಸಿ ದೇವರ ತಪ್ಪಿಹೋಗದ ಭರವಸೆ ಆತನ ಪ್ರೀತಿ ಮತ್ತು ಪರಾಮರಿಕೆ, ಆತನ ಜ್ಞಾನಯುಕ್ತವಾದ ಮಾರ್ಗದರ್ಶನ ಮತ್ತು ಎಲ್ಲವನ್ನು ಮೀರಿ ಕರ್ತನು ನಮಗೆ ಅನುಗ್ರಹಿಸುವ ಆಶೀರ್ವಾದ ಇವುಗಳನ್ನಾಧರಿಸಿ ಹಾಗೇ ನಾವು ನಡೆಯುವ ಹಾದಿಯಲ್ಲಿ ಒಳ್ಳೆಯ ಅಥವ ಕೆಟ್ಟ ಸಂಗತಿಗಳೂ ಸಂಭವಿಸಿದುಂಟು ಇದರ ಜೊತೆಯಲ್ಲೆ ಅನುಕೂಲ ಅಥವ ಅನಾನುಕೂಲ ಸಂದರ್ಭಗಳು ಬಂದೊದಗುವುದುಂಟು. ಹೀಗಿರುವಲ್ಲಿ ದೇವರ ಅತಿಪ್ರಿಯ ಮಕ್ಕಳು ಕ್ರಿಸ್ತನ ಸಾತ್ವಿಕತ್ವವನ್ನು ಸಮಾಧಾನವನ್ನು ಹೆಚ್ಚೆಚ್ಚಾಗಿ ಅನುಕರಣೆ ಮಾಡಿ, ಆತನ ಅನುಗ್ರಹವನ್ನು ಅಂಗೀಕರಿಸಿ, ಹೇಗೆ ಕರ್ತನು ದೇವರ ಸೂತ್ರ ಮತ್ತು ನಿರ್ದೇಶನವನ್ನು ತನ್ನ ಆಯುಧವನ್ನಾಗಿಸಿಕೊಂಡು ನಡೆದನೋ, ಹಾಗೆಯೇ ಯಾರು ಕರ್ತನ ಚಿತ್ತದಂತೆ ನಡೆಯುವರೋ ಅಂತಹವರು ಆತನ ನೊಗವನ್ನು ಹೊತ್ತು ಆತನಲ್ಲಿ ಕಲಿಯುವರು. ಆಂಥವರಿಗೆ ಕರ್ತನು ಬಲವನ್ನು ಅನುಗ್ರಹಿಸುವನು.-Z-'96,79 (ಖ-1961)

* * *

ಜೂನ್ - 22

ಹೀಗಿರಲು ಮನೆವಾರ್ತೆಯವನು ನಂಬಿಗಸ್ತನಾಗಿ ಕಂಡುಬರುವದು ಅವಶ್ಯವಲ್ಲವೇ........... ಅವನವನ ಸಾಮರ್ಥ್ಯದ ಪ್ರಕಾರ ಕೊಟ್ಟು,

-1ಕೊರಿಂಥ 4:2; ಮತ್ತಾಯ 25:15

ದೇವರು ಎಲ್ಲರಿಗೂ ಕೊಟ್ಟಂತ ಒಂದು ಮೋಹರಿಯೇನಂದರೆ ದೇವರು, ದೇವ ಜನರನ್ನು ನೀತಿವಂತರೆಂದು ನಿರ್ಣಯಿಸಿರುವ ದೈವಾನುಗ್ರಹದ ಆಶೀರ್ವಾದವನ್ನು ಪ್ರತಿನಿಧಿಸುತ್ತದೆ. ಇತರೆ ಪ್ರತಿಭೆಗಳ ಪ್ರಮಾಣದಲ್ಲಿ ಸ್ವಾಭಾವಿಕ ಅವಕಾಶಗಳಿದ್ದಂತೆ ವ್ಯತ್ಯಾಸಗಳಿರುತ್ತವೆ. ಈ ಪ್ರತಿಭೆಗಳು ಸಾಮಾನ್ಯವಾಗಿ ತಂದೆ ದೇವರದ್ದಾಗಿದೆ. ಉದಾಹರಣೆ ದೇವರ ವಾಕ್ಯ ಮತ್ತು ಆತನ ಆತ್ಮ. ನಾವು ನೀತಿವಂತರೆಂಬ ನಿರ್ಣಯ ಹೊಂದಿರುವದು. ದೇವರು ಯೋಜಿಸಿರುವ ಯೋಜನೆಯಂತೆ ಕ್ರಿಸ್ತನು ತನ್ನ ರಕ್ತವನ್ನು ಸುರಿಸಿ ಕೊಟ್ಟಿರುವ ಬಹುಮಾನ. ಒಂದು ಮೋಹರಿ ಪ್ರತಿಯೊಬ್ಬನು ಸಾಮಾನ್ಯ ಸ್ಥಾನದಲ್ಲೂ ಮತ್ತು ಅನುಮೋದಿಸಿರುವ ಸೇವಕರ ಸ್ಥಾನದಲ್ಲಿ ನಿಂತಿರುವದನ್ನು ಸೂಚಿಸುತ್ತದೆ. ಅವರು ಉತ್ಸುಕತೆಯುಳ್ಳವರಾಗಿ ತಮ್ಮನ್ನು ಯಜ್ಞವನ್ನಾಗಿ ಸಮರ್ಪಿಸಿಕೊಳ್ಳಲು ಅನುಮತಿ ನೀಡುತ್ತದೆ. ಆದರೆ, "ತಲಾಂತುಗಳು" ಅವನವನ ಸಾಮರ್ಥ್ಯಕ್ಕನುಗುಣವಾಗಿ ವಿತರಿಸಲಾಗಿದೆ. ತಲಾಂತುಗಳು ಅಂದರೆ, ದೇವರ ಸೇವೆಯಲ್ಲಿ ನಿರತರಾಗಲು ಅವರಿಗೆ ದೊರಕುವ ಅವಕಾಶ, ಸಮಯ ಸಂದರ್ಭಗಳಿಗೆ ಅನ್ವಯಿಸುವದು. ಅದು ವಿದ್ಯೆಯ ತಲಾಂತಾಗಿರಬಹುದು. ಹಣದ ಪ್ರಭಾವ ಒಳ್ಳೆಯ ಆರೋಗ್ಯ, ಸಮಯ, ಚಾಕಚಕ್ಯತೆ, ಬುದ್ಧಿವಂತಿಕೆ ಜೊತೆಗೆ ಇವೆಲ್ಲವನ್ನು ದೇವರ ಸೇವೆಯಲ್ಲಿ ಉಪಯೋಗಿಸುವ ಅವಕಾಶಗಳು.-Z-'07,63 (ಖ-1972)

* * * * * * * * *

ಜೂನ್ - 23

ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ, ಅರವತ್ತರಷ್ಟಾಗಲಿ, ಮುವತ್ತರಷ್ಟಾಗಲಿ ಫಲಕೊಡುತ್ತಾನೆ; ಇವನೇ ಒಳ್ಳೆಯ ನೆಲವಾಗಿರುವವನು ಎಂದು ಹೇಳಿದನು.

-ಮತ್ತಾಯ 13:23

ಫಲಕೊಡವದರಲ್ಲಿ ಬೇರೆ ಬೇರೆ ಪ್ರಮಾಣ ಉಂಟು - 30, 60 ಮತ್ತು 100 ಅಥವ 10 ಮೋಹರಿಗಳು ಮತ್ತು 5, ಎದುರಾಗಿ ಬರುವ ವಿವಿಧ ಅಡೆತಡೆಗಳು ಇವುಗಳನ್ನು ಎದುರಿಸುವದಾಗಿದೆಯೇ ಹೊರತು ಅಪನಂಬಿಗಸ್ತರಾಗಿ ಕೃಪಾವರಗಳನ್ನು ದುರುಪಯೋಗಪಡಿಸಿಕೊಳ್ಳುವದಲ್ಲ. ಕೆಲವರು ಬಹಳ ಆಸಕ್ತಿಯಿಂದ, ಶ್ರದ್ಧೆಯಿಂದ ಹೆಚ್ಚು ಕಾಲ ಕಾರ್ಯನಿರತರಾಗಿದ್ದರೂ ಅದರಿಂದಾಗುವ ಫಲಿತಾಂಶ ಅಲ್ಪವಾಗಿರುವದು. ಆದರೆ, ಬೇರೆ ಕೆಲವರು ಅಷ್ಟೇ ಸಮಯದಲ್ಲಿ ಅವರಂತೆಯೆ ತಮ್ಮ ಚಿತ್ತವನ್ನು ತೊಡಗಿಸಿಕೊಂಡು ಕಾರ್ಯದಲ್ಲಿ ನಿರತರಾಗಿರುವವರು ಹೆಚ್ಚಿನ ಫಲಿತಾಂಶವನ್ನು ಪಡೆಯುವರು. ಇನ್ನು ಕೆಲವರು ತಪ್ಪುವದಲ್ಲದೆ, ಆಗಾಗ ಹಿಂದೆ ಸರಿದು ನಂತರ ಅವುಗಳಿಂದ ಪಾರಾದರೂ, ಇದರ ನಿಮಿತ್ತ ಅವರು ಕಳಕೊಂಡ ಸಮಯ ಮತ್ತು ಅವಕಾಶಗಳನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ಇಂತಹವರನ್ನು ದೇವರು ಕ್ಷಮಿಸಿ ಪುನಃ ಅವರನ್ನು ಸೇರಿಸಿಕೊಂಡರು, ಅವರು ಅಂದಿನಿಂದ ತಾಳ್ಮೆಯಿಂದಲೂ ಎಚ್ಚರಿಕೆಯಿಂದಲೂ ಕೊನೆಯವರೆಗೂ ಓಡಿದರೂ ಸಹ ಕಳಕೊಂಡ ಸಮಯ ಅವಕಾಶಗಳನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ.- Z-'96,99 (ಖ-1972)

* * *  * * *  * * *

ಜೂನ್ - 24

ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು. ಹೇಗಂದರೆ, ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು.

-ರೋಮಾ. 8:17

ಕರ್ತನ ವಿಷಯದಲ್ಲಿ ದೇವರು ಆತನನ್ನ ನಡೆಸಿದ ರೀತಿ ಎಂಥದೆಂಬದನ್ನು ನಾವು ತಂದೆ ದೇವರ ಯೋಜನೆಯನ್ನು ಅಧ್ಯಯನ ಮಾಡುವಾಗ ತಿಳಿದುಬರುವದು. ಅದೇನಂದರೆ, ದೇವರು ಎಲ್ಲಾ ರೀತಿಯ ನೋವು ಪರೀಕ್ಷೆ ಮತ್ತು ಹಿಂಸೆಗಳಿಲ್ಲದೆ ನಮ್ಮನ್ನು ಸುಖಕರವಾದ ಪಥದಲ್ಲಿ ನಡಿಸಿ, ಮಹಿಮ ಪದವಿಗೆ ಕೊಂಡೊಯ್ಯುವನೆಂದು ತಿಳಿಯಬಾರದು. ನಾವು ನಡೆಯುವ ದಾರಿ ಬೇರೆಯೇ ಆಗಿದೆ. ನಾವು ಕ್ರಿಸ್ತನ ಹೆಜ್ಜೆಯ ಜಾಡಿನಲ್ಲಿ ನಡೆಯುವವರಾಗಿದ್ದೇವೆ. ಕ್ರಿಸ್ತನು ಲೋಕದ ಪಾಪವನ್ನು ನಿವಾರಿಸಿರುವದಲ್ಲದೆ, ಆತನ ಶಿಷ್ಯರಾದ ನಮಗೆ ಮಾದರಿಯಾಗಿದ್ದಾನೆಂಬದನ್ನು ನಾವು ಅರಿಯಬೇಕು. ದೇವರ ಯೋಜನೆಯನ್ನ

ನಾವು ಇಷ್ಟರಮಟ್ಟಿಗೆ ತಿಳಿಕೊಳ್ಳುವ ಪಕ್ಷಕ್ಕೆ ಹಿಂಸೆ, ನೋವು, ಕಷ್ಟಗಳಿಂದ ನಮ್ಮನ್ನು ಪಾರು ಮಾಡು ಎಂಬದಾಗಿ ಕೇಳದೆ, ದೇವರು ತನ್ನ ಜ್ಞಾನದಿಂದ ಹಿಂಸೆ, ನೋವು, ಸಂಕಷ್ಟಗಳ ಪಥವನ್ನ ಏರ್ಪಡಿಸಿ ಈ ಪಥದಲ್ಲಿ ನಾವು ನಡೆದು ಮಹಿಮಾ ಸ್ಥಿತಿಯನ್ನು ಸೇರಬೇಕೆಂಬದು ಆತನ ಚಿತ್ತವಾಗಿದೆ ಎಂಬದನ್ನು ಅರಿಯಬೇಕು.-Z-'96,151 (ಖ-1997)

* * *

ಜೂನ್ - 25

ಪ್ರಾರ್ಥನೆಯನ್ನು ತಪ್ಪದೆ ಮಾಡುವವರಾಗಿ ಅದರಲ್ಲಿ ಎಚ್ಚರವಾಗಿದ್ದು, ದೇವರಿಗೆ ಕೃತಜ್ಞತಾಸ್ತುತಿ ಮಾಡಿರಿ. -ಕೊಲೊಸ್ಸೆ 4:2

ದೇವರು ವಾಗ್ದಾನ ಮಾಡಿರುವ ಬಹುಮಾನವನ್ನು ಪಡೆಯಲು ನಮ್ಮ ಜೀವನದಲ್ಲಿ ನಂಬಿಕೆ ಮತ್ತು ತಾಳ್ಮೆಯನ್ನ ಪರೀಕ್ಷಿಸÀಲಿಕ್ಕೆ ಒದಗಿ ಬರುವ ಪರೀಕ್ಷೆಗಳೂ ಪ್ರಾರ್ಥಿಸುವ ಸಂದರ್ಭಗಳಾಗಿರುತ್ತವೆ. ಜಯಗಳಿಸಲು ನಾವು ಪ್ರತಿ ಸಲ ಸೋಲುವಾಗಲು ಅದು ಪ್ರಾರ್ಥಿಸುವ ಸಂದರ್ಭ ಮತ್ತು ದೇವರಲ್ಲಿ ಕ್ಷಮೆ ಯಾಚಿಸಿ ಆಶೀರ್ವಾದವನ್ನು ಬೇಡುವ ಈ ಸಂದರ್ಭ ನಮ್ಮಲ್ಲಿರುವ ಆಳವಾದ ಬಲಹೀನತೆಯ ಪಾಠವಾಗಿ ಪರಿಣಮಿಸಿ ಮುಂದಿನ ಅದೇ ರೀತಿಯ ಪರೀಕ್ಷೆಗಳಲ್ಲಿ ದೇವರು ವಾಗ್ದಾನ ಮಾಡಿರುವ ಕೃಪಾ ಪೂರ್ಣ ಸಹಾಯವನ್ನ ಗಟ್ಟಿಯಾಗಿ ಹಿಡಿದು ತೊಳಲುವಂತೆ ಈ ಸಂದರ್ಭಗಳು ಮಾಡುವದು. ನಮ್ಮ ಸ್ವಾರ್ಥತೆಯ ಮೇಲೆ ಜಯ ಸಾಧಿಸುವ ಪ್ರತಿಯೊಂದು ಘಳಿಗೆ ಪ್ರಾರ್ಥನೆ ಸಂದರ್ಭವಾಗಿದ್ದು, ನಾವು ಹೆಚ್ಚಿಗೆ ಹಿಗ್ಗದೆ ಉಬ್ಬಿಕೊಳ್ಳದೆ, ದೀನ ಸ್ವಭಾವ ಉಳ್ಳವರಾಗಿ ಎಚ್ಚರಿಕೆಯಿಂದಿದ್ದು, ವಿರೋಧಿಯ ಮುಂದಿನ ದಾಳಿಯನ್ನು ಎದುರಿಸಲು ಸಿದ್ಧರಾಗಿರಬೇಕು. ಸತ್ಯದ ಪರವಾಗಿ ನಾವು ಮಾಡುವ ಪ್ರತಿಯೊಂದು ಸೇವೆಯು ಕೃತಜ್ಞತೆಯಿಂದ ರಾಜಾಧಿರಾಜನಿಗೆ ಪ್ರಾರ್ಥನೆಯನ್ನು ಸಲ್ಲಿಸಿ, ಆ ಕಾರಣದಿಂದ ಬಾಧೆಪಟ್ಟು ಮುಂದೆ ಸೇವೆ ಮಾಡಲು ಇನ್ನೂ ಹೆಚ್ಚಿನ ಅವಕಾಶಗಳು ದೊರೆಯುವಂತೆ ದೇವರಲ್ಲಿ ಪ್ರಾರ್ಥಿಸಿ ಬುದ್ಧಿವಂತಿಕೆಯಿಂದ ಈ ಕೃಪಾಪೂರ್ಣವಾದ ಅವಕಾಶಗಳನ್ನು ಉಪಯೋಗಿಸುವಂತಾಗಲಿ.-Z-'96,163 (ಖ-2004)

* * *

ಜೂನ್ - 26

ಆದದರಿಂದ, ದೇವಜನರಾದ ಸಹೋದರರೇ, ಪರಲೋಕಸ್ವಾಸ್ತ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ, ನಾವು ಪ್ರತಿಜ್ಞೆ ಮಾಡಿ ಒಪ್ಪಿಕೊಂಡಿರುವ ದೇವಪ್ರೇಷಿತನೂ, ಮಹಾಯಾಜಕನೂ ಆಗಿರುವ ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ. -ಇಬ್ರಿಯ 3:1

ಕ್ರಿಸ್ತನ ದೇಹವಾಗಲಿಕ್ಕೆ ಕರೆಯಲ್ಪಟ್ಟಿರುವ ಪ್ರತಿಯೊಬ್ಬ ಸದಸ್ಯನು ದೇವರ ಚಿತ್ತದಂತೆ ಲೋಕದ ದುರ್ಬಲತೆಯ ವಿಷಯದಲ್ಲಿ ಮರುಕ ತೋರಿಸತಕ್ಕದ್ದು. ಇವರು ದೇವ ರಾಜ್ಯದಲ್ಲಿ ಆಡಳಿತ ಮಾಡಲು

ದೇವರು ಇವರನ್ನು ನೇಮಿಸುವಾಗ, ಇವರು ಮಮತೆ, ಸಹಾನುಭೂತಿ, ಅನುಕಂಪ ಉಳ್ಳವರಾಗಿ, ರಾಜವಂಶಸ್ತರಾದ ಇವರು ಲೋಕದ ನ್ಯಾಯ ತೀರಿಸುವರು.  ಕರ್ತನು ಮತ್ತು ಒಡೆಯನು ಲೋಕದ ಯಾವ ಬಲಹೀನತೆಯನ್ನು ಹೊಂದಿರಲಿಲ್ಲ.  ಆತನು ಪರಿಶುದ್ಧನು, ನಿಷ್ಕಳಂಕನು ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿದ್ದು, ನಮ್ಮ ಬಗ್ಗೆ ಸಹಾನುಭೂತಿ ಮತ್ತು ಅನುಕಂಪ ಉಳ್ಳವನಾಗುವುದಕ್ಕಾಗಿ ನಮ್ಮ ಬಲಹೀನತೆ ಮತ್ತು ವ್ಯಾಧಿಯನ್ನು ತಾನೆ ಹೊತ್ತುಕೊಂಡು ನಮ್ಮ ನಂಬಿಗಸ್ತ ಮಹಾಯಾಜಕನಾದನು. ಹೀಗಿರುವಾಗ ಆತನ ಕೈಕೆಳಗೆ ಯಾಜಕರಾಗುವ ನಾವು ಯಾಜಕತ್ವವನ್ನು ಪಡೆಯಬೇಕಾದರೆ, ನಾವು ತಯಾರಾಗಲಿಕ್ಕೆ ಯಾವ ಪಾಠವನ್ನು ಕಲಿಯುವ ಅವಶ್ಯಕತೆ ಇರುವದಿಲ್ಲ ಎಂಬದಾಗಿ ಹೇಳುವದು ತರ್ಕಬದ್ಧವಾಗಿರುವದಿಲ್ಲ.  ನಾವು ಕ್ರಿಸ್ತನೊಂದಿಗೆ ಹಿಂಸೆಯನ್ನನುಭವಿಸುವದಾದರೆ, ಆತನೊಂದಿಗೆ ರಾಜ್ಯವನ್ನಾಳುವೆವು.-Z-'96,208 (ಖ-2028)

* * *

ಜೂನ್ - 27

ಕ್ರಿಸ್ತನ ಅನ್ಯೋನ್ಯತೆಯಲ್ಲಿ ಸೇರಿಸಿ ನಮ್ಮನ್ನು ನಿಮ್ಮೊಂದಿಗೆ ಸ್ಥಿರಪಡಿಸುವವನು ದೇವರೇ; ಆತನು ನಮ್ಮ ಮೇಲೆ ಮುದ್ರೆ ಹಾಕಿ ನಮ್ಮ ಹೃದಯಗಳಲ್ಲಿ ಪವಿತ್ರಾತ್ಮವನ್ನು ಸಂಚಕಾರವಾಗಿ ಅನುಗ್ರಹಿಸಿದ್ದಾನೆ.
-2ಕೊರಿಂಥ 1:21,22

ಒಬ್ಬ ನಿಜ ಶಿಷ್ಯನಿಗೆ ಗುರುತು ಅಥವ ಮುದ್ರೆ ಯಾವದೆಂದರೆ, ಆತನು ಹೊಂದಿರುವ ಕ್ರಿಸ್ತನ ಆತ್ಮವೇ ಆಗಿದೆ.  ಈ ಪವಿತ್ರಾತ್ಮನು ಸ್ಪಷ್ಟಗೊಳ್ಳುವ ಮೂರು ವಿಧಗಳಾವುವೆಂದರೆ, (1) ದೇವರನ್ನು ಸರ್ವೋತ್ಕøಷ್ಟವಾಗಿ ಪ್ರೀತಿಸುವದು.  ಆತನ ಚಿತ್ತವನ್ನು ಹಿಂಸೆಗೊಳಗಾದರೂ ನೆರವೇರಿಸುವದು.  (2) ಸಹೋದರರನ್ನು ನಿಸ್ವಾರ್ಥತೆಯಿಂದಲೂ, ಪ್ರಾಮಾಣಿಕರಾಗಿ ಶುದ್ಧತೆಯಿಂದ ಪ್ರೀತಿಸುವದು; ಅವರ ಏಳಿಗೆಯನ್ನು ಬಯಸುವದು ಮತ್ತು ಯಾವಾಗಲು ಎಚ್ಚರಿಕೆಯಿಂದಿದ್ದು, ಒಳ್ಳೇದನ್ನು ಮಾಡುವದು.  (3) ಪ್ರಪಂಚದ ವಿಷಯದಲ್ಲಿ ಸಹಾನುಭೂತಿ ವ್ಯಕ್ತಪಡಿಸುವದಲ್ಲದೆ, ಸಮಯವಿರಲಾಗಿ ಒಳ್ಳೇದನ್ನ ಮಾಡುವದು ಮತ್ತು ಆದಷ್ಟುಮಟ್ಟಿಗೆ ಎಲ್ಲರೊಂದಿಗೆ ಯಾವಾಗಲು ಸಮಾಧಾನದಿಂದಿರಲು ಇಚ್ಛಿಸಿ ಪ್ರಯತ್ನಿಸುವದು.-Z-'96,212 (ಖ2032)

* * *

ಜೂನ್ - 28

ನೀನೇ ಬುದ್ಧಿವಂತನು ಎಂದೆಣಿಸದೆ, ಯೆಹೋವನಿಗೆ ಭಯಪಟ್ಟು ಕೆಟ್ಟದ್ದನ್ನು ತೊರೆದು ಬಿಡು.
-ಜ್ಞಾನೋಕ್ತಿಗಳು 3:7

ದೇವರ ಮಕ್ಕಳು ತಮ್ಮನ್ನು ತಾವು ಹೆಚ್ಚಿಸಿಕೊಳ್ಳುವದು ಅಥವ ಗರ್ವಪಡುವದು, ಭಯಂಕರವಾದದು, ಇದು ಅವರ ಅಭಿವೃದ್ದಿಯನ್ನು ಕುಂಠಿತಗೊಳಿಸುವದಲ್ಲದೆ, ಹೃದಯದ ಸುಧಾರಣೆಯನ್ನು ಸ್ಥಬ್ದಗೊಳಿಸುವದು ಮತ್ತು ಇತರರ ಸೇವೆ ಮಾಡುವದನ್ನು ತಡೆಯುವದು. ಅದರಲ್ಲೂ ದೇವರ ಸೇವೆಯಲ್ಲಿ ನಿರತರಾಗಲು ಅಡ್ಡಿಪಡಿಸುವದು. ದೇವರ ವಾಕ್ಯ ಹೇಳುವದೇನಂದರೆ, "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ. ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ನಮ್ಮಲ್ಲಿ ನಾವು ವಿಶ್ವಾಸವಿಡುವದನ್ನು ಜ್ಞಾನವು ನಿರಾಕರಿಸುತ್ತದೆ. ಯಾಕಂದರೆ, ನಮ್ಮಲ್ಲಿ ಬಲಹೀನತೆ ಮತ್ತು ಅಪರಿಪೂರ್ಣತೆ ಇರುವದರಿಂದ, ನಾವು ದೇವರಿಗೆ ಭಯಪಟ್ಟು ಆತನನ್ನೇ ಆಶ್ರಯಿಸಿಕೊಂಡು ನಡೆಯುವದರಿಂದ ನಮ್ಮನ್ನು ಎಲ್ಲಾ ರೀತಿಯಲ್ಲೂ ಬಲಪಡಿಸಿ ಬಿದ್ದುಹೋಗಿರುವ ಪರಿಸ್ಥಿತಿಯಿಂದುಂಟಾಗಿರುವ ಕೆಟ್ಟದ್ದನ್ನು ತೊರೆದುಬಿಡಲು ಸಾಧ್ಯವಾಗುತ್ತದೆ.-Z-'96,263 (ಖ-2060)

* * *

ಜೂನ್ - 29

ನಿರ್ಮಲ ಚಿತ್ತರು ಧನ್ಯರು, ಅವರು ದೇವರನ್ನು ನೋಡುವರು.

-ಮತ್ತಾಯ 5:8

"ನಿರ್ಮಲ ಚಿತ್ತರು" ಅಂದರೆ, ಗುಣದಲ್ಲಿ ಪರಿಪೂರ್ಣತೆ ಎಂದಾಗಲಿ ಮಾತಿನ ಅಥವ ಯೋಚನೆಯ ಪರಿಪೂರ್ಣತೆ ಎಂದಾಗಲಿ ಅಲ್ಲ. ಇವೆಲ್ಲವುಗಳ ಮನೋಗತ (ಉದ್ದೇಶ)ದ ಪರಿಪೂರ್ಣತೆ. ನಮ್ಮ ಆಶಯ ಯೋಚನೆ ಮಾತು ಕೃತಿ ಇವುಗಳ ಪರಿಪೂರ್ಣತೆಗಾಗಿ ಪ್ರಯಾಸಪಡುವವರಾಗಿರಬೇಕು. ನಮ್ಮ ಮುಂದಿರುವ ಪ್ರಮಾಣ ಎಂತಹದ್ದಾಗಿರಬೇಕು ಅಂದರೆ, ನಮ್ಮ ಹೃದಯ, ಚಿತ್ತ, ದೈವ ಪ್ರಮಾಣದಂತಿರಲು ಸಮ್ಮತಿಸಬೇಕು. "ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವು ದೋಷವಿಲ್ಲದವರಾಗಿರ್ರಿ." ದೇವರು ಈ ಪರಿಪೂರ್ಣಮಟ್ಟಕ್ಕಿಂತ ಕಡಿಮೆ ದರ್ಜೆಯನ್ನು ನೇಮಿಸಿಲ್ಲ. ಆದರೂ ದೇವರು ನಮಗೆ ಕ್ರಿಸ್ತನ ಮೂಲಕ ಕೃಪೆ, ಕ್ಷಮೆ ಮತ್ತು ಶಾಂತಿಯನ್ನು ಅನುಗ್ರಹಿಸಿದ್ದಾನೆ. ನಾವು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯುವದಾದರೆ, ನಿರ್ಮಲವಾದ ಹೃದಯ ಇಕ್ಕಟ್ಟಾದ ಮಾರ್ಗದ ಒಂದು ಅತಿ ಮುಖ್ಯವಾದ ಹೆಜ್ಜೆಯಾಗಿರುವದು.-Z-'00,71 (ಖ-2585)

* * *         * * *         * * *

ಜೂನ್ - 30

ಸುಗ್ಗಿ ಕಾಲದಲ್ಲಿ ನಾನು ಕೊಯ್ಯುವವರಿಗೆ ......... ಗೋಧಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು. -ಮತ್ತಾಯ 13:30

ಕಾಲವು ಕೊಂಚ, ಸುಗ್ಗಿಯ ಕೆಲಸ ಬಹಳ, ಕೊಯ್ಯುವವರು ಬಹಳ ಕಡಿಮೆ. ನಮ್ಮ ಪ್ರತಿಷ್ಠೆಪಡಿಸಿಕೊಂಡಿರುವ ಕಾಲದಲ್ಲಿ ಹಗಲಿರುವಾಗಲೇ ನಾವು ಕೆಲಸ ಮಾಡಬೇಕು. ಯಾಕಂದರೆ, ನಮಗೆ ಗೊತ್ತಿರುವಂತೆ ರಾತ್ರಿ ಬರುತ್ತದೆ. ಆಗ ಯಾರು ಕೆಲಸ ಮಾಡಲಾರರು. ನಾವು ನಮ್ಮ ಜೀವನವನ್ನು ಸಾವಿನ ಪರ್ಯಂತ ಪ್ರತಿಷ್ಠೆಪಡಿಸಿಕೊಂಡಿದ್ದೇವೆ. ನಮ್ಮ ಮಹಾ ಸುಗ್ಗಿಯ ಯಜಮಾನನು ನಮಗೆ ಆಜ್ಞಾಪಿಸಿರುವದೇನಂದರೆ, ನಾವು ನಿಜವಾದ ಗೋಧಿಕಾಳನ್ನು ಆರಿಸಿ ಆತನ ಕಣಜಕ್ಕೆ ತುಂಬುವದು. ಹೀಗಿರುವಾಗ ನಾವು ಲೋಕದ ಕಾರ್ಯಗಳಿಗಾಗಲಿ, ಅನುಪಯುಕ್ತವಾಗಿ ಇತರೇ ವಿಷಯಗಳಿಗಾಗಲಿ ಅಥವ ಸಾಮಾಜಿಕ ಅನಾನುಕೂಲತೆಗಳಿಗಾಗಲಿ ಸಮಯವನ್ನು ವ್ಯರ್ಥಮಾಡದೆ ನಮಗಿರುವುಗಳಲ್ಲಿ ತೃಪ್ತರಾಗಿದ್ದು, ಲೌಕಿಕ ವಿಷಯಗಳಿಗೆ ಹೆಚ್ಚಿನ ಆದ್ಯತೆ ಕೊಡದೆ ಕರ್ತನು ನಮಗೆ ನೇಮಿಸಿರುವ ಕಾರ್ಯದಲ್ಲಿ ಮಗ್ನರಾಗಿ ಹೃದಯಪೂರ್ವಕವಾಗಿಯು ಪ್ರಾಮಾಣಿಕವಾಗಿಯೂ ದುಡಿದು ಆತನ ಮೆಚ್ಚುಗೆಗೆ ಪಾತ್ರರಾಗಿ ಆತನಿಂದ "ಭಲಾ, ನಂಬಿಗಸ್ತನಾದ ಒಳ್ಳೆಯ ಆಳು ನೀನು, ನಿನ್ನ ಧಣಿಯ ಸೌಭಾಗ್ಯದಲ್ಲಿ ಸೇರು" ಎಂಬ ಮಾತನ್ನು ಕರ್ತನಿಂದ ಕೇಳೋಣ.-Z-'00,234 (ಖ-2674)

* * *